ತೀರಿಹೋಗಿದೆ. ನೀನು ಶತ್ರುಗಳನ್ನ ಕೊಲ್ಲೋನು, ನಿಜ. ಆದರೆ ವೀರರಾದ ಪಾಂಡವರೂ ನೀನೂ ಒಂದೇ ಬಸಿರಿಂದ ಬಂದವರು. ದೈವವನ್ನ ಮನುಷ್ಯ ಮೀರಲಾರ ಬಿಡು. ನನಗೆ ಖುಷಿ ಮಾಡಬೇಕು ಅಂತಿದ್ದರೆ ಹೋಗು ಮಗು ಅವರನ್ನ ಸೇರಿಕೋ. ನನ್ನ ಜತೇಗೇ ಈ ವೈರ ಕೊನೆ ಆಗಲಿ. ಈ ಭೂಮಿ ಮೇಲಿನ ರಾಜರ ಕಷ್ಟವೆಲ್ಲಾ ಈಗಲೇ ಕಳೀಲಿ.

**ಕರ್ಣ:** ನೀನು ಹೇಳೋ ಹಾಗೆ ನಾನು ಕುಂತೀ ಮಗ, ಸೂತನ ಮಗನಲ್ಲ. ಅದರಲ್ಲಿ ಅನುಮಾನವೇ ಇಲ್ಲ. ಅದು ನನಗೂ ಗೊತ್ತು. ಆದರೆ ಕುಂತಿ ನನ್ನನ್ನ ಬಿಸಾಡಿಬಿಟ್ಟಳು. ನನ್ನ ಸಾಕಿ ದೊಡ್ಡದು ಮಾಡಿದ್ದು ಸೂತ. ನಾನೀಗ ತಿನ್ನತಾ ಇರೋದು ದುರ್ಯೋಧನನ ಅನ್ನ. ವಾಸುದೇವನ ಮಗ ಪಾಂಡವರಿಗಾಗಿ ದೃಢವಾಗಿ ನಿಂತಿಲ್ಲವಾ, ಹಾಗೇನೇ. ಈ ನನ್ನ ಮೈ, ಕುಟುಂಬ, ಶ್ರೇಯಸ್ಸು, ಹೆಸರು, ಇರುವುದೆಲ್ಲವನ್ನೂ ದುರ್ಯೋಧನನಿಗೆ ಮೀಸಲು ಇಟ್ಟುಬಿಟ್ಟಿದೀನಿ. ಯುದ್ಧ ಇಲ್ಲದೆ ರೋಗದಲ್ಲಿ ಸಾಯೋ ಸ್ಥಿತಿ ಬರಬಾರದು ಅಂತ ಪಾಂಡವರ ಕೋಪಾನ ಸದಾ ಕರಳೊಳಗೆ ಇಟ್ಟುಕೊಂಡಿದೀನಿ.

ಈಗ ನನ್ನ ಕೈ ಮೀರಿದೆ. ತಿರಗಾಮುರಗಾ ಮಾಡೋದಕ್ಕೆ ಆಗಲ್ಲ ಈಗ ಎಲ್ಲಾ ವಿಧಿ. ಮನುಷ್ಯನಿಗೆ ಮೀರಿದ್ದು ಅಂದ ಮೇಲೆ ಯಾಕೆ ಸರೀ ಮಾಡಕ್ಕೆ ಹೋಗತೀಯ. ಅಜ್ಜಾ, ಭೂಮಿ ನೆವೆದು ಹೋಗೋ ಕಾಲ ಬಂದದ್ದರ ಶಕುನಗಳನ್ನ ನೀನೂ ನೋಡಿದೀಯಾ, ಸಭೇಲಿ ಹೇಳಿಯೂ ಇದ್ದೀ.

ವಾಸುದೇವ ಪಾಂಡವರು ಅಜೇಯರು ಅಂತ ಲಾಗಾಯ್ತಿನಿಂದಲೂ ನನಗೆ ಗೊತ್ತು. ಅದಕ್ಕೇ ಅವರ ಜತೆ ಹೋರಾಡೋಕೆ ನನಗೆ ಇಷ್ಟೊಂದು ಹುರುಪು. ಅವರನ್ನ ಗೆದ್ದೇ ಗೆಲ್ಲತೀನಿ ಅಂತ ನಿಚ್ಚಯಿಸಿಕೊಂಡು ಧನಂಜಯನ ಜತೆ ಯುದ್ಧ ಮಾಡತೀನಿ ಅದು ನನ್ನ ಧರ್ಮ. ಈ ವೈರ ತೀರಾ ದಾರುಣ ನೋವಿನದು ಅದನ್ನ ಇಳಿಸೋದಕ್ಕೆ ನನ್ನ ಕೈಲಿ ಆಗಲ್ಲ.

ಅಪ್ಪಾಜಿ, ಒಪ್ಪಿಗೆ ಕೊಟ್ಟುಬಿಡು, ಯುದ್ಧ ಮಾಡೇ ತೀರಬೇಕು ನಾನು ಚಪಲದಲ್ಲೋ ಮಾತಿನ ರಭಸದಲ್ಲೋ ಏನಾದರೂ ಕೆಟ್ಟ ಮಾತಾಡಿದ್ದರೆ ಮರೆತು ಬಿಡು.

ಒಪ್ಪಿಗೆ ಕೊಡು ನಿನ್ನ ಒಪ್ಪಿಗೆ ಪಡೆದರೆ ಗೆದ್ದೇ ಗೆಲ್ಲತೀನಿ.

**ಭೀಷ್ಮ:** ನಿನಗೆ ಈ ಮೈಗೇರಿದ ನಂಜು ವೈರಾನ ಇಳಿಸಿಕೊಳ್ಳೋಕೆ ಸಾಧ್ಯವೇ ಇಲ್ಲ ಅಂತಾದರೆ ಇನ್ನೇನು ಮಾಡತೀ, ಸ್ವರ್ಗ ಸಿಗಲಿ ಅಂತ ಯುದ್ಧ ಮಾಡು. ಕೋಪ, ಖುಷಿ ಬಿಟ್ಟು ನಿನ್ನ ಕೆಲಸ ನೀ ಮಾಡು. ಆದಷ್ಟು ಒಳ್ಳೇ ತರದಲ್ಲಿ ನಡಕೋ. ನಿನ್ನ ಕೋರಿಕೆಗೆ ಒಪ್ಪಿಗೆ ಕೊಡತಾ ಇದ್ದೇನೆ.

ಅಹಂಕಾರ ಇಲ್ಲದೆ, ಬಲ ತಾಕತ್ತು ಬಳಸು, ಕ್ಷತ್ರಿಯನಿಗೆ ಯುದ್ಧಕ್ಕಿಂತ ದೊಡ್ಡ ಧರ್ಮ ಯಾವುದು!

ವೈರ ಇಳಿಸೋಕೆ ಅಂತ ತುಂಬಾ ದಿನದಿಂದ ಪಡಬಾರದ ಕಷ್ಟಪಟ್ಟೆ ಕರ್ಣ, ನಿಜ ಹೇಳತಿದೀನಿ, ನನ್ನ ಕೈಲಾಗಲಿಲ್ಲ ಕಂದಾ...

ಭೀಷ್ಮ ಹೀಗೆ ಹೇಳಿದ ಮೇಲೆ ರಾಧೇಯ ರಥ ಏರಿ ದುರ್ಯೋಧನನ ಬಳಿಗೆ ಬಂದ.

